

# ಭರತಪುರದ ಬಾನಾಡಿಗಳು...

**ರಾಜಸ್ಥಾನ ಮರಳುಗಾಡಿಗೆ ಪ್ರಸಿದ್ಧ. ಮರುಭೂಮಿಗೆ ಸಂಪೂರ್ಣ ವಿರುದ್ಧ ಪರಿಸರ ಹೊಂದಿರುವ ಭರತಪುರ ಬಾನಾಡಿಗಳ ಆವಾಸಸ್ಥಾನವಾಗಿ ವಿಶ್ವಪ್ರಸಿದ್ಧವಾದುದು. ಜಗತ್ತಿನ ಸೌಂದರ್ಯ ಮತ್ತು ಚಲನಶೀಲತೆಯ ಕ್ಯಾನ್ವಾಸ್‌ನಂತೆ ಕಾಣಿಸುವ ಈ ಪಕ್ಷಿಧಾಮದ ಚರಿತ್ರೆಯಲ್ಲೂ ರಕ್ತಸಿಕ್ತ ಪುಟಗಳಿವೆ.**



**■ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ**

**ಕಾ**ಡು ಎಂದರೆ ನಮ್ಮ ಗ್ರಹಿಕೆಗಳೇ ಬೇರೆ. ಅದು ಪ್ರಕೃತಿದತ್ತವಾಗಿ ರೂಪುಗೊಂಡ ಒಂದು ಭೌತಿಕ ಸೃಷ್ಟಿ ಎನ್ನುವುದು ಜನಪ್ರಿಯ ನಂಬಿಕೆ. ಆದರೆ ರಾಜಸ್ಥಾನದ ಭರತಪುರದಲ್ಲಿರುವ ‘ಕೇವಲಾದೇವ ಘಾನಾ ರಾಷ್ಟ್ರೀಯ ಉದ್ಯಾನವನ’ ಕಾಡಿನ ಕುರಿತ ನಮ್ಮ ರೂಢಿಗತ ನಂಬಿಕೆಗಳನ್ನು ಬದಲಿಸುವಂತಿದೆ. ‘ಕೇವಲಾದೇವ ರಾಷ್ಟ್ರೀಯ ಉದ್ಯಾನವನ’ ಹಾಗೂ ‘ಭರತಪುರ ಪಕ್ಷಿಧಾಮ’ ಎಂದೂ ಕರೆಯಲಾಗುವ ಇದು ಮಾನವ ನಿರ್ಮಿತ ಹಾಗೂ ಮಾನವ ನಿರ್ವಹಣೆಗೆ ಒಳಪಟ್ಟ ತೇವಭೂಮಿಯ ಪಕ್ಷಿಧಾಮ.

ಭರತಪುರದಲ್ಲಿ ರಸ್ತೆಬದಿ ಬೆಳಗಿನ ತಿಂಡಿಯನ್ನು ತಿನ್ನುತ್ತಿದ್ದ ನನ್ನ ಜೊತೆಗೂಡಿದ್ದು ಗುರುಮಿತ್‌ಸಿಂಗ್ ಎನ್ನುವ ಸೈಕಲ್ ರಿಕ್ಷಾವಾಲಾ. ಆತನೇ ಅಭಯಾರಣ್ಯದ ಸುತ್ತಾಟದ ಕುರಿತು ಪ್ರಸ್ತಾಪವಿಟ್ಟ. ಅವನ ಸೈಕಲ್ ರಿಕ್ಷಾ ಏರಿದ ನಮಗೆ ಇಡೀ ಅಭಯಾರಣ್ಯದ ಚರಿತ್ರೆಯನ್ನೇ ಆತ ಮಾತುಗಳಲ್ಲಿ ಚಿತ್ರಿಸಿದ ಬಗೆ ಒಂದು ಅಪೂರ್ವ ಕಥೆಯಂತಿತ್ತು. ಪ್ರತೀ